# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 969 |
| ಸದಸ್ಯರ ಹೆಸರು | : | ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 21.12.2021 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ಕಾಗದ ಕಾರ್ಖಾನೆ (M.P.M) ಯನ್ನು ಸರ್ಕಾರ ಖಾಸಗೀಕರಣ ಮಾಡುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಖಾಸಗೀಕರಣಗೊಳಿಸಲು ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು) | ಹೌದು<br>ಮೈಸೂರು ಕಾಗದ ಕಾರ್ಖಾನೆಯು ರಾಜ್ಯ ಸರ್ಕಾರದ ಒಂದು ಉದ್ದಿಮೆಯಾಗಿದ್ದು, ಈ ಸಂಸ್ಥೆಯು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧೀನದಲ್ಲಿರುತ್ತದೆ.<br>ಸಂಸ್ಥೆಯು ತೀವ್ರತರವಾದ ನಷ್ಟವನ್ನು ಅನುಭವಿಸುತ್ತಿರುವುದರಿಂದ ಸರ್ಕಾರವು ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ ಕಾರ್ಖಾನೆಯ ಎಲ್ಲಾ ಉತ್ಪಾದನಾ ಘಟಕಗಳನ್ನು ದಿನಾಂಕ: 21.11.2015ರಿಂದ ಸ್ಥಗಿತಗೊಳಿಸಲಾಗಿರುತ್ತದೆ. ಕಾರ್ಖಾನೆಯನ್ನು ಗುತ್ತಿಗೆ ಆಧಾರದಲ್ಲಿ ನೀಡಬೇಕೆಂದು ತೀರ್ಮಾನ ಕೈಗೊಂಡು, ಕಾರ್ಖಾನೆಯ ಎಲ್ಲಾ ಕಾರ್ಯಚಟುವಟಿಕೆಗಳನ್ನು ಖಾಸಗಿ ಸಂಸ್ಥೆಯವರಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| (ಆ) | ಈ ಕಾರ್ಖಾನೆಯನ್ನು ಸರ್ಕಾರವು ಖಾಸಗೀಕರಣಗೊಳಿಸದೆ ಸರ್ಕಾರದಿಂದಲೇ ನಡೆಸಲು ಸಾಧ್ಯವಿಲ್ಲವೇ; ಇಲ್ಲದಿದ್ದಲ್ಲಿ, ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು) | ಎಂಪಿಎಂ ಸಂಸ್ಥೆಯು ತೀವ್ರತರಹದ ಹಣಕಾಸಿನ ಸಮಸ್ಯೆಯನ್ನು ಎದುರಿಸುತ್ತಿದ್ದು, ಸರ್ಕಾರವು ಕಾರ್ಖಾನೆಯನ್ನು ಪುನರುಜ್ಜೀವನಗೊಳಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ ಕಾರ್ಖಾನೆಯ ಕಾರ್ಯಚಟುವಟಿಕೆಗಳನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದಲ್ಲಿ ನೀಡಬೇಕೆಂದು ತೀರ್ಮಾನ ಕೈಗೊಂಡು, ಕಾರ್ಖಾನೆಯ ಎಲ್ಲಾ ಉತ್ಪಾದನಾ ಘಟಕಗಳನ್ನು ದಿನಾಂಕ: 21.11.2015ರಿಂದ ಸ್ಥಗಿತಗೊಳಿಸಲಾಗಿರುತ್ತದೆ. ಕಾರ್ಮಿಕ ಇಲಾಖೆಯ ಆದೇಶ ಸಂಖ್ಯೆ : ಕಾಇ 226 ಐಡಿಜ 2019, ದಿನಾಂಕ: 07.10.2021ರಲ್ಲಿ ಕಾರ್ಖಾನೆಯ ಎಲ್ಲಾ ಉತ್ಪಾದನಾ ಚಟುವಟಿಕೆಗಳನ್ನು ಮುಚ್ಚಲು/ಸ್ಥಗಿತಗೊಳಿಸಲು ಆದೇಶವನ್ನು ನೀಡಿರುತ್ತದೆ.<br>ಈ ಕಾರಣದಿಂದಾಗಿ ದಿನಾಂಕ: 22.10.2021 ರಿಂದ ಜಾರಿಯಾಗುವಂತೆ ಅರಣ್ಯ ಇಲಾಖೆಯ ಎರವಲು ಅಧಿಕಾರಿಗಳು ಹಾಗೂ 07 ಸಿಬ್ಬಂದಿಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಉದ್ಯೋಗಿ/ಅಧಿಕಾರಿಗಳ ಸೇವೆಯನ್ನು ಸಮಾಪ್ತಿಗೊಳಿಸಲಾಗಿರುತ್ತದೆ. |

| | | |
|---|---|---|
| (ಇ) | ಮೈಸೂರು ಕಾಗದ ಕಾರ್ಖಾನೆಗೆ ಕಚ್ಚಾ ಸಾಮಗ್ರಿ ಪೂರೈಸುವ ಹಾಗೂ ಸರಿ ಸುಮಾರು ಹಾಲಿ 500 ಕೋಟಿ ಬೆಲೆ ಬಾಳುವ ಮರಗಳನ್ನು ಹೊಂದಿರುವ ಸಾವಿರಾರು ಎಕರೆ ಅರಣ್ಯ ಪ್ರದೇಶವನ್ನು ಖಾಸಗಿಯವರಿಗೆ ವಹಿಸಿರುವುದರ ಹಿಂದೆ ಇರುವ ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು) | ಮೈಸೂರು ಕಾಗದ ಕಾರ್ಖಾನೆಯ ಅರಣ್ಯ ಭೂಮಿಯನ್ನು ಅರಣ್ಯ ಇಲಾಖೆಯು 2020 ರಿಂದ 2060 ರವರೆಗೆ 40 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಿ ಮೈಸೂರು ಕಾಗದ ಕಾರ್ಖಾನೆಗೆ ನೀಡಿರುತ್ತದೆ. ಈ ಅರಣ್ಯ ಪ್ರದೇಶವನ್ನು ಮೈಸೂರು ಕಾಗದ ಕಾರ್ಖಾನೆಯೇ ಸ್ವತಃ ನಿರ್ವಹಿಸುತ್ತಿದ್ದು, ಇದರ ನಿರ್ವಹಣೆಗೆ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ಅಧಿಕಾರಿಗಳ ಮೇಲುಸ್ತುವಾರಿಕೆಯೊಂದಿಗೆ ನಿರ್ವಹಿಸಲಾಗುತ್ತಿದೆ. ಈ ಅರಣ್ಯ ಪ್ರದೇಶವನ್ನು ಖಾಸಗಿಯವರಿಗೆ ವಹಿಸಿರುವುದಿಲ್ಲ. |
| (ಈ) | ಖಾಸಗಿ ಕಂಪನಿಯಾದ ಈಸ್ಟ್-ವೆಸ್ಟ್ ಪೇಪರ್ ಮಿಲ್ಸ್, ದಾಂಡೇಲಿ ಇದು ಲಾಭದಲ್ಲಿರಲು ಹಾಗೂ ಮೈಸೂರು ಕಾಗದ ಕಾರ್ಖಾನೆಯು ನಷ್ಟದಲ್ಲಿರಲು ಕಾರಣಗಳೇನು; (ವಿವರವಾದ ಮಾಹಿತಿ ನೀಡುವುದು) | ಮೈಸೂರು ಕಾಗದ ಕಾರ್ಖಾನೆಯು 1936ರಲ್ಲಿ ಪ್ರಾರಂಭಿಸಿದ ಕೈಗಾರಿಕೆಯಾಗಿದ್ದು, ಯಂತ್ರಗಳು ಮತ್ತು ತಾಂತ್ರಿಕತೆಯು ಹಳೆಯದಾಗಿದ್ದು, ಮೈಸೂರು ಕಾಗದ ಕಾರ್ಖಾನೆಯ ಸ್ಥಿತಿಯು ಸತತ ನಷ್ಟದಲ್ಲಿರುವುದರಿಂದ ರೋಗಗ್ರಸ್ಥ ಕಾರ್ಖಾನೆ ಎಂದು ಬಿ.ಐ.ಎಫ್.ಆರ್ ನಲ್ಲಿ ನೋಂದಾಯಿಸಲಾಗಿರುತ್ತದೆ. ಕಾರ್ಖಾನೆಯು ನಷ್ಟದಲ್ಲಿರುವ ಸರ್ಕಾರಿ ಸ್ವಾಮ್ಯದ ಕೈಗಾರಿಕೆಯಾಗಿರುತ್ತದೆ. ಪ್ರಸ್ತುತ ಅಂದಾಜು ನಷ್ಟ ರೂ.1244.00 ಕೋಟಿಗಳಷ್ಟು (ಲೆಕ್ಕ ಪರಿಶೋಧನೆಯಲ್ಲದ) ಇರುತ್ತದೆ. ಉತ್ಪಾದನಾ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಾಗಿದ್ದು, ಮಾರುಕಟ್ಟೆಯ ಏರಿಳಿತ, ಅಂತರಾಷ್ಟ್ರೀಯ ಆಮದು/ರಫ್ತು ಮಾರುಕಟ್ಟೆಯ ಪರಿಣಾಮದಿಂದಾಗಿ ಹಾಗೂ ಸಿಬ್ಬಂದಿ ವೆಚ್ಚ ಸಾಮಾನ್ಯವಾಗಿ ಶೇಕಡ 8 ರಿಂದ 10 ಇರಬೇಕಾಗಿದ್ದು, ಕಾರ್ಖಾನೆಯ ಸಿಬ್ಬಂದಿ ವೆಚ್ಚ ಶೇಕಡ 30ಕ್ಕಿಂತ ಹೆಚ್ಚಾಗಿರುತ್ತದೆ. ಅಲ್ಲದೆ, ಹಳೆಯ ತಂತ್ರಜ್ಞಾನದ ಯಂತ್ರಗಳು, ಈ ಎಲ್ಲಾ ಕಾರಣಗಳಿಂದ ಕಾರ್ಖಾನೆಯು ನಷ್ಟಕ್ಕೊಳಗಾಗಿದೆ. |
| (ಉ) | ಪಾರಂಪರಿಕ ಉದ್ಯಮಗಳನ್ನು ಉಳಿಸಿಕೊಳ್ಳಲು ಸರ್ಕಾರವು ಏನಾದರೂ ಯೋಜನೆಯನ್ನು ರೂಪಿಸಿದೆಯೇ? (ವಿವರವಾದ ಮಾಹಿತಿ ನೀಡುವುದು) | ಮೈಸೂರು ಕಾಗದ ಕಾರ್ಖಾನೆಯು ನಿರಂತರ ನಷ್ಟವನ್ನು ಅನುಭವಿಸಲು ಪ್ರಾರಂಭಿಸಿದಾಗ, ಕಾರ್ಖಾನೆಯನ್ನು ಮಾರಾಟ ಮಾಡದೇ ಖಾಸಗಿ ಘಟಕಕ್ಕೆ ಕಾರ್ಯಾಚರಣೆಗಳನ್ನು ಗುತ್ತಿಗೆ ನೀಡಲು ನಿರ್ಧರಿಸಿದೆ. |

ಸಿಐ 57 ಸಿಪಿಎಂ 2021(ಇ)

(ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು.